# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-3404/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 16/03/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ರಜಾಕ್ ಸಾಬ್ ಬಡಾಸಾಬ್ ಮಕಂದರ್, ಹಿರೇಬೇವನೂರ ಗ್ರಾಮ ಮತ್ತು ಅಂಚೆ, ಇಂಡಿ ತಾಲ್ಲೂಕು, ವಿಜಾಪುರ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ರಜಾಕ್ ಸಾಬ್ ಬಡಾಸಾಬ್ ಮಕಂದರ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಹಿರೇಬೇವನೂರು ಗ್ರಾಮ ಪಂಚಾಯತಿಯಲ್ಲಿ ನರೇಗಾ ಯೋಜನೆಯಡಿಯಲ್ಲಿ ಎದುರುದಾರರು 2011 ರಿಂದ 2014ನೇ ಸಾಲಿನವರೆಗೆ ಮನಸೋಇಚ್ಛೆ ಬ್ಯಾಂಕ್ ಪೇಮಂಟ್‌ಗಳನ್ನು ಮಾಡಿ ಹಣವನ್ನು ಲಪಟಾಯಿಸಿರುತ್ತಾರೆ. ಹಸಿರು ಹೊನ್ನು ಯೋಜನೆ ಅಡಿಯಲ್ಲಿ ತೆಂಗಿನ ಸಸಿ ನೆಡುವ ಯೋಜನೆಗೆ ಸಂಬಂಧಿಸಿದಂತೆ ಕೆಲಸವನ್ನು ಮಾಡದೇ ಸುಮಾರು ರೂ.25.00 ಲಕ್ಷ ಮೊತ್ತದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಗ್ರಾಮ ಶೌಚಾಲಯ ನಿರ್ಮಾಣದ ಕಾರ್ಯಕ್ರಮದಲ್ಲಿ 2000 ರಿಂದ 2014ನೇ ಇಸವಿಯವರೆಗೆ ರೂ.10,000/- ಮೊತ್ತದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ನರೇಗಾ ಯೋಜನೆಯಡಿಯಲ್ಲಿ 2010 ರಿಂದ 2014ರವರೆಗೆ ಯಾವುದೇ ಕೆಲಸ ಮಾಡಿಸದೆ ದಾಖಲೆಗಳನ್ನು ಸೃಷ್ಟಿಸಿ ಸುಮಾರು ರೂ.3.00 ಕೋಟಿ ಮೊತ್ತದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ 2010 ರಿಂದ 2013ರವರೆಗೆ ಕೈಗೊಳ್ಳಲಾದ ಕಾಮಗಾರಿಗಳು ಕಳಪೆಮಟ್ಟದ ಕಾಮಗಾರಿಗಳಾಗಿರುತ್ತದೆ. 2010 ರಿಂದ 2014ನೇ ಸಾಲಿನವರೆಗೆ ಬಸವ ವಸತಿ ಯೋಜನೆಯಡಿಯಲ್ಲಿ ಆಯ್ಕೆಯಾಗಿದ್ದ ಫಲಾನುಭವಿಗಳು ಮನೆ ಕಟ್ಟಿಕೊಂಡಿದ್ದರೂ ಸಹ ಅವರಿಗೆ ಹಣವನ್ನು ಸಂದಾಯ ಮಾಡಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ದೂರುದಾರರು ಮಾಡಿರುವ ಆರೋಪಗಳಂತೆ ತಾವು ಯಾವುದೇ ದುರ್ನಡತೆ ಎಸಗಿರುವುದಿಲ್ಲವೆಂದು, ನರೇಗಾ ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಕ್ರಿಯಾ ಯೋಜನೆಗೆ ಹಾಗೂ ಅಂದಾಜು ಪತ್ರಿಕೆಗಳಿಗೆ ಮಂಜೂರಾತಿ ಪಡೆಯಲಾಗಿರುತ್ತದೆ. ಕೆಲಸ ಮುಗಿದ ಬಗ್ಗೆ ಪ್ರಮಾಣ ಪತ್ರ ಪಡೆಯಲಾಗಿದೆ. ನೋಡಲ್ ಅಧಿಕಾರಿಗಳ ವರದಿ ಪಡೆದ ನಂತರ ಸಂಬಂಧಪಟ್ಟವರಿಗೆ ಹಣ ಸಂದಾಯ ಮಾಡಲಾಗಿದೆ. ಕೂಲಿ ಕಾರ್ಮಿಕರಿಗೆ ನೇರವಾಗಿ ಚೆಕ್ ಮುಖೇನ ಹಣ ಸಂದಾಯ ಮಾಡಲಾಗಿದೆ. ಹಸಿರು ಹೊನ್ನು ಯೋಜನೆಯಡಿಯಲ್ಲಿ 2010-11ರಲ್ಲಿ ಅಂದಾಜು ಮೊತ್ತವಾದ ರೂ.9.723 ಲಕ್ಷದಲ್ಲಿ ಕೂಲಿ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ರೂ.6.1280 ಲಕ್ಷದ ಮೊತ್ತದ ಹಣವನ್ನು ಸಂದಾಯ ಮಾಡಲಾಗಿರುತ್ತದೆ. ಉಳಿದ ರೂ.3.400 ಲಕ್ಷ ಮೊತ್ತದ ಹಣವನ್ನು ದುರ್ಗಾ ಎಂಟರ್‌ಪ್ರೈಸಸ್ ಸಂಸ್ಥೆಗೆ ಸಾಮಗ್ರಿ ಕಡೆಗೆ ಚೆಕ್ ಮುಖಾಂತರ ಸಂದಾಯ ಮಾಡಲಾಗಿರುತ್ತದೆ. ಹಾಗೆಯೇ ವಸತಿ ಯೋಜನೆಯಡಿಯಲ್ಲಿ ಸರ್ಕಾರದ ಮಾರ್ಗಸೂಚಿಯಂತೆ ಜಿಪಿಎಸ್ ಮುಖಾಂತರ ಮನೆಗಳನ್ನು ಕಟ್ಟಿಕೊಂಡಿರುವ ಬಗ್ಗೆ ದಾಖಲಿಸಿ ನೇರವಾಗಿ ವಸತಿ ನಿಗಮದಿಂದ ಫಲಾನುಭವಿಗಳ ಖಾತೆಗೆ ಹಣವನ್ನು ಜಮಾ ಮಾಡಲಾಗಿರುತ್ತದೆ. ಆದ್ದರಿಂದ, ತಮ್ಮಗಳಿಂದ ಯಾವುದೇ ಅವ್ಯವಹಾರ ನಡೆದಿಲ್ಲವೆಂದು ತಿಳಿಸಿರುತ್ತಾರೆ.

3. ಸದರಿ 1 ಮತ್ತು 2ನೇ ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ಸದರಿ ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, 2010-11ನೇ ಸಾಲಿನಲ್ಲಿ ಎದುರುದಾರರುಗಳು ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶರಣಪ್ಪ ಹಾಗೂ ಜಿಲ್ಲಾ ಪಂಚಾಯತಿಯ ಅಭಿಯಂತರರಾದ ಶ್ರೀ ಕನಾಮ್ಡಿ ಹಾಗೂ ಶ್ರೀ ಚಂದು ವಾಲಿಕರ್, ನೋಡಲ್ ಆಫೀಸರ್, ಶ್ರೀ ಪಾಟೀಲ್, ನೋಡಲ್ ಆಫೀಸರ್, ಶ್ರೀ ಭಜಂತ್ರಿ, ನೋಡಲ್ ಆಫೀಸರ್ ಇವರೆಲ್ಲರೂ ಶಾಮೀಲಾಗಿ ಪಂಚಾಯತಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಒಂದೇ ದಿನದಲ್ಲೇ ರೂ.20.00 ಲಕ್ಷ ಹಣವನ್ನು ಸಿಂಡಿಕೇಟ್ ಬ್ಯಾಂಕ್, ಅಗರಖೇಡ ಶಾಖೆಯಿಂದ ಹಣವನ್ನು ಹಿಂಪಡೆದಿರುತ್ತಾರೆ ಹಾಗೂ ಅದೇ ದಿನ ಖಾತೆಯನ್ನು ರದ್ದುಪಡಿಸಿಕೊಂಡಿರುತ್ತಾರೆ. ರಸ್ತೆ ಕಾಮಗಾರಿಯನ್ನು ನಿರ್ವಹಿಸದೇ ಇದ್ದರೂ ಹಣವನ್ನು ಬಿಡುಗಡೆ ಮಾಡಲಾಗಿರುತ್ತದೆ. ಗಿಡಗಳ ಸಸಿಗಳನ್ನು ನೆಟ್ಟಿರುವ ಬಗ್ಗೆ ಹಣವನ್ನು ತೆಗೆದಿದ್ದು, ಪರಿಶೀಲಿಸಲಾಗಿ ಯಾವುದೇ ಗಿಡಗಳನ್ನು ನೆಟ್ಟಿರುವುದು ಕಂಡುಬಂದಿರುವುದಿಲ್ಲವೆಂದು, ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

4. ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಈ ಸಂಸ್ಥೆಯ ತಾಂತ್ರಿಕ ಕೋಶಕ್ಕೆ ವಹಿಸಲಾಗಿದ್ದು, ಸದರಿ ಸಂಸ್ಥೆಯಿಂದ ದೂರುದಾರರಿಗೆ ಅನೇಕ ಬಾರಿ ಪತ್ರ ವ್ಯವಹಾರ ನಡೆಸಿ ದೂರಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿದ್ದು, ದೂರುದಾರರು ದಾಖಲೆಗಳನ್ನು ಹಾಜರುಪಡಿಸದೆ ಇರುವ ಹಿನ್ನೆಲೆಯಲ್ಲಿ ತನಿಖೆ ಕೈಗೊಳ್ಳಲು ಕಷ್ಟಸಾಧ್ಯವೆಂದು ತಿಳಿಸಿ ಕಡತವನ್ನು ಹಿಂದಿರುಗಿಸಲಾಗಿದ್ದು, ನಂತರ ಪ್ರಕರಣದ ತನಿಖೆಯನ್ನು ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ವಿಜಾಪುರ ಇವರಿಗೆ ವಹಿಸಲಾಗಿದ್ದು, ಸದರಿಯವರು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ.

5. ಸದರಿ ತನಿಖಾಧಿಕಾರಿಯವರು ತಮ್ಮ ತನಿಖಾ ವರದಿಯಲ್ಲಿ ಅರ್ಜಿದಾರರು ಆಪಾದಿಸಿದಂತೆ ಹಿರೇಬೇವನೂರು ಗ್ರಾಮ ಪಂಚಾಯತಿಯ 2010–11ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀ ರಮೇಶ್ ಶಿವಣ್ಣ ತಮಶೆಟ್ಟಿ ಇವರು ತಮ್ಮ ತಾಯಿ ಅವಮ್ಮ ತಮಶೆಟ್ಟಿ ಇವರ ಹೆಸರಿನಲ್ಲಿ ಎರಡು ಮನೆಗಳನ್ನು, ತಮ್ಮ ಪತ್ನಿಯಾದ ಶ್ರೀದೇವಿ ತಮಶೆಟ್ಟಿ ಇವರ ಹೆಸರಲ್ಲಿ ಒಂದು ಮನೆಯನ್ನು ಮತ್ತು ಅಣ್ಣನ ಪತ್ನಿ ಶ್ರೀಮತಿ ಕವಿತಾ ತಮಶೆಟ್ಟಿ ಇವರ ಹೆಸರಿನಲ್ಲಿ ಎರಡು ಮನೆಗಳನ್ನು ಹಾಗೂ ಶ್ರೀಮತಿ ಸವಿತಾ ತಮಶೆಟ್ಟಿ ಎಂಬ ಹೆಸರಲ್ಲಿ ಇನ್ನೊಂದು ಮನೆಯನ್ನು ಗ್ರಾಮ ಪಂಚಾಯತಿ ವತಿಯಿಂದ ಹಂಚಿಕೆ ಮಾಡಿರುವುದು ಕಂಡು ಬಂದಿರುತ್ತದೆ ಎಂದು ಶ್ರೀಮತಿ ಕವಿತಾ ತಮಶೆಟ್ಟಿ ಮತ್ತು ಶ್ರೀಮತಿ ಸವಿತಾ ಎ ತಮಶೆಟ್ಟಿ ಇವರುಗಳು ಒಬ್ಬರೇ ವ್ಯಕ್ತಿಯಾಗಿರುತ್ತಾರೆಂದು ತಿಳಿಸಿರುತ್ತಾರೆ. ಈ ಫಲಾನುಭವಿಗಳ ಬಗ್ಗೆ ರಾಜೀವ್ ಗಾಂಧಿ ವಸತಿ ನಿಮಗದಿಂದ ದೊರೆತ ಮಾಹಿತಿಯಲ್ಲಿನ ಮನೆಯ ಪೋಟೋಗಳಿಗೆ ಹಾಗೂ ಸ್ಥಾನಿಕ ಪರಿಶೀಲನೆಯಿಂದ ಕಂಡು ಬಂದ ವಾಸ್ತವತೆಗೆ ವ್ಯತ್ಯಾಸ ಕಂಡು ಬಂದಿರುತ್ತದೆ ಎಂದು ಫಲಾನುಭವಿಗಳ ಕಡತದಲ್ಲಿರುವ ರೂ.50/–ರ ಇ–ಸ್ಟಾಂಪ್‌ನ ಕರಾರು ಪತ್ರದಲ್ಲಿ ನಮೂದಿಸಿರುವ ಮನೆ ನಂಬರ್/ಆಸ್ತಿ ಜಾಗ ಹಾಗೂ ಮನೆ ಇರುವ ಜಾಗ ಇವುಗಳಲ್ಲಿ ವ್ಯತ್ಯಾಸ ಇರುತ್ತದೆ. ಹಾಗೂ ಪಂಚಾಯತಿ ಆಸ್ತಿ ರಿಜಿಸ್ಟರ್ ಪ್ರಕಾರ ಸದರಿ ಆಸ್ತಿ/ಜಾಗ ಫಲಾನುಭವಿಗಳ ಹೆಸರಿನಲ್ಲಿ ಇರುವುದಿಲ್ಲ. ಇದಲ್ಲದೇ, ಸದರಿ ಕರಾರು ಪತ್ರದ ಆಸ್ತಿ ನಂಬರ್‌ಗಳಲ್ಲಿ ಚೆಕ್‌ಬಂದಿಯಂತೆ ಪರಿಶೀಲಿಸಿದಲ್ಲಿ, ಆ ಸ್ಥಳಗಳಲ್ಲಿ ಮನೆಗಳನ್ನು ಕಟ್ಟಿರುವ ಬಗ್ಗೆ ಕಂಡು ಬರುವುದಿಲ್ಲ. ಬಸವ ವಸತಿ ಯೋಜನೆಯಡಿಯಲ್ಲಿ ಮನೆ ನಿರ್ಮಾಣದ ಬಗ್ಗೆ ನೋಡಲ್ ಆಫೀಸರ್‌ರವರ ಮಾಹಿತಿ ಲಭ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

6. ಮುಂದುವರೆದು, ತನಿಖಾಧಿಕಾರಿಯವರು ತಮ್ಮ ತನಿಖಾ ವರದಿಯಲ್ಲಿ ಶ್ರೀಮತಿ ಕವಿತಾ ತಮಶೆಟ್ಟಿ ಮತ್ತು ಶ್ರೀಮತಿ ಸವಿತಾ ತಮಶೆಟ್ಟಿ ಇವರುಗಳು ಒಬ್ಬರೇ ವ್ಯಕ್ತಿಯಾಗಿರುತ್ತಾರೆಂದು ತಿಳಿಸಿರುತ್ತಾರೆ ಹಾಗೂ ಶ್ರೀ ಮುತ್ತಪ್ಪ ರೇವಪ್ಪ ಚಿಕ್ಕಬೇವನೂರ, ಹಿಂದಿನ ಅಧ್ಯಕ್ಷರು, ಹಿರೇಬೇವನೂರು ಗ್ರಾಮ ಪಂಚಾಯತಿ, ಶ್ರೀ ಡಿ.ಎಂ. ಗಿರಿಗೌಡರ್, ಹಿಂದಿನ ಪಿಡಿಒ, ಹಿರೇಬೇವನೂರು ಗ್ರಾಮ ಪಂಚಾಯತಿ,

ಶ್ರೀ ರಮೇಶ್ ಎಸ್ ತಮಶೆಟ್ಟಿ ಹಾಗೂ ಶ್ರೀ ಎಲ್.ವ್ಹಿ. ಜಿದ್ದಿ, ಪಿಡಿಒ, ಹಿರೇಬೇವನೂರು ಗ್ರಾಮ ಪಂಚಾಯತಿ ಇವರೆಲ್ಲೂರು ಮೇಲೆ ತಿಳಿಸಿದ ದುರ್ವರ್ತನೆಗೆ ಜವಾಬ್ದಾರರಾಗಿರುತ್ತಾರೆಂದು ತಿಳಿಸಿರುತ್ತಾರೆ. ಆದ್ದರಿಂದ, ಶ್ರೀ ಮುತ್ತಪ್ಪ ರೇವಪ್ಪ ಚಿಕ್ಕಬೇವನೂರು, ಹಿಂದಿನ ಅಧ್ಯಕ್ಷರು, ಹಿರೇಬೇವನೂರು ಗ್ರಾಮ ಪಂಚಾಯತಿ, ಶ್ರೀ ಡಿ.ಎಂ. ಗಿರಿಗೌಡರ್, ಹಿಂದಿನ ಪಿಡಿಒ, ಹಿರೇಬೇವನೂರ ಗ್ರಾಮ ಪಂಚಾಯತಿ ಇವರುಗಳನ್ನು ಪ್ರಕರಣದಲ್ಲಿ 3 ಮತ್ತು 4ನೇ ಎದುರುದಾರರೆಂದು ಅಳವಡಿಸಿಕೊಳ್ಳಲು ಆದೇಶ ಮಾಡಲಾಗಿದ್ದು, ಅದರಂತೆ ಅಳವಡಿಸಿಕೊಂಡು, ಎಲ್ಲ ಎದುರುದಾರರಿಂದ ತನಿಖಾ ವರದಿಗೆ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ಎಲ್ಲಾ ಎದುರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ ತಾವುಗಳು ಸರ್ಕಾರದ ಮಾರ್ಗಸೂಚಿಯನ್ವಯ ಕೆಲಸಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ ಹಾಗೂ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಫಲಾನುಭವಿಗಳಿಗೆ ಹಣವನ್ನು ನೇರವಾಗಿ ಅವರ ಖಾತೆಗೆ ಹಾಗೂ ಚೆಕ ಮೂಲಕ ನೀಡಲಾಗಿರುತ್ತದೆ. ಆದ್ದರಿಂದ, ಯಾವುದೇ ರೀತಿ ಹಣ ದುರುಪಯೋಗವಾಗಿಲ್ಲವೆಂದು ಹಾಗೂ ತಮ್ಮಿಂದ ಯಾವುದೇ ಕರ್ತವ್ಯಲೋಪವಾಗಿಲ್ಲವೆಂದು ತಿಳಿಸಿರುತ್ತಾರೆ.

7. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಗಳನ್ನು, ತನಿಖಾ ವರದಿಯ ವರದಿಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ವಸತಿ ಯೋಜನೆಯಡಿಯಲ್ಲಿ ಹಿರೇಬೇವನೂರ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಶ್ರೀ ರಮೇಶ್ ಶಿವಣ್ಣ ತಮಶೆಟ್ಟಿಯವರು ತಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ಮನೆಯನ್ನು ಹಂಚಿಕೆ ಮಾಡಿಕೊಂಡಿರುವುದು ಕಂಡು ಬರುತ್ತದೆ, ಸದರಿ ಅಧ್ಯಕ್ಷರ ತಾಯಿಯಾದ ಅವ್ವಮ್ಮ ಶಿವಣ್ಣ ತಮಶೆಟ್ಟಿ ಇವರನ್ನು 2010-11ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆ ಮಾಡಲಾಗಿರುತ್ತದೆ ಹಾಗೂ ಮನೆಯನ್ನು ಮಂಜೂರು ಮಾಡಲಾಗಿರುತ್ತದೆ. ಮುಂದುವರೆದು, ಸದರಿ ಫಲಾನುಭವಿಯ ಆಯ್ಕೆಯಾದ ಕೋಡ್ ನಂಬರ್ 163193 ಇದ್ದು, ಆಯ್ಕೆ ಪಟ್ಟಿಯ ಕ್ರ.ಸಂ.64ರಲ್ಲಿ ಇರುತ್ತದೆ. ಇವರು ರೂ.50/- ರ ಇ-ಸ್ಟಾಂಪ್ ಪೇಪರ್ ಮೇಲೆ ಕರಾರು ಪತ್ರ ನೀಡಿದ್ದು, ವಸತಿ ರಹಿತ ಪ್ರಮಾಣ ಪತ್ರವನ್ನು, ಹಾತ್ ನಕಾಶೆಯನ್ನು, ಚೆಕ್ ಲಿಸ್ಟ್ ಅನ್ನು ಮೂಲ ದಾಖಲಾತಿಗಳ ಸ್ವೀಕೃತಿಯ ನಮೂನೆಯನ್ನು ಹಾಜರುಪಡಿಸಿರುತ್ತಾರೆ. ಕಟ್ಟಡ ಕಟ್ಟುವ ಬಗ್ಗೆ ಪರವಾನಗೆ ಮಾತ್ರ ಇದ್ದು ಮತ್ತಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಕರಾರು ಪತ್ರದ 2ನೇ ಪುಟ ಖಾಲಿ ಇರುತ್ತದೆ. ಇದಲ್ಲದೇ ವಸತಿ ರಹಿತ ಫಲಾನುಭವಿಯ ಪ್ರಮಾಣ ಪತ್ರ, ಮೂಲ ದಾಖಲಾತಿಗಳ ಸ್ವೀಕೃತಿ ಪತ್ರ ಇವುಗಳಲ್ಲಿ ದಿನಾಂಕವಾಗಲೀ, ಮೊಹರು ಹಾಕುವ ಜಾಗದಲ್ಲಿ ಖಾಲಿ ಬಿಟ್ಟಿರುವುದು ಕಂಡು ಬರುತ್ತದೆ (ಸದರಿ ಅವ್ವಮ್ಮ ಎಸ್ ತಮಶೆಟ್ಟಿ ಇವರಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲಾಗಿದೆ). ನಮೂನೆ-1 ರಲ್ಲಿ ಫಲಾನುಭವಿಯ ಸಹಿ ಮಾತ್ರ ಇದ್ದು,

ನಮೂನೆಯಲ್ಲಿ ಭರ್ತಿ ಮಾಡಬೇಕಾಗಿದ್ದ ಮಾಹಿತಿಯನ್ನು ಖಾಲಿ ಬಿಡಲಾಗಿರುತ್ತದೆ. ಕಟ್ಟಡ ಪರವಾನಗೆ ಪತ್ರದಲ್ಲಿ ಅಧ್ಯಕ್ಷರು ಮತ್ತು ಪಿಡಿಒ ರವರ ಸಹಿಗಳು ಮಾತ್ರ ಇದ್ದು, ಸದರಿ ಪರವಾನಗೆಯಲ್ಲಿ ತುಂಬ ಬೇಕಾದ ಮಾಹಿತಿಗಳನ್ನು ಖಾಲಿ ಬಿಡಲಾಗಿದೆ. ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಎಲ್ಲಾ ಹಂತಗಳ ಯವುದೇ ಪೋಟೋಗಳನ್ನು ಅಳವಡಿಸಿರುವುದಿಲ್ಲ ಮತ್ತು ಕರಾರು ಪತ್ರದಲ್ಲಿ ಮನೆ ನಂಬರ್ ಅನ್ನು 85 ಎಂದು ನಮೂದಿಸಿದ್ದು, 30 x 40 ಜಾಗದಲ್ಲಿ ಎಂದು ನಮೂದಿಸಲಾಗಿದೆ.

8. ಶ್ರೀಮತಿ ಶ್ರೀದೇವಿ ತಮಶೆಟ್ಟಿ ಇವರನ್ನು 2010-11ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆ ಮಾಡಲಾಗಿದ್ದು (ಸದರಿಯವರಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲಾಗಿದೆ), ಇವರಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಇ-ಸ್ಟಾಂಪ್ ಕರಾರು ಪತ್ರದಲ್ಲಿ ಅನೇಕ ಮಾಹಿತಿಗಳನ್ನು ಖಾಲಿ ಬಿಟ್ಟಿದ್ದು, ನಿಗಮದ ಪರವಾಗಿ ಯಾರೂ ಸಹಿ ಮಾಡಿರುವುದಿಲ್ಲ. ಫಲಾನುಭವಿಯ ಸಹಿ ಮಾತ್ರ ಇರುತ್ತದೆ. ಕರಾರು ಪತ್ರದ 2ನೇ ಪುಟ ಖಾಲಿ ಇರುತ್ತದೆ. ಚೆಕ್‌ಲಿಸ್ಟ್‌ಗೆ ಫಲಾನುಭವಿಯ ಪೋಟೋ ಲಗತ್ತಿಸಿರುವುದು ಕಂಡು ಬರುವುದಿಲ್ಲ. ಮನೆ ಕಟ್ಟಿರುವ ಬಗ್ಗೆ ಎಲ್ಲ ಹಂತದ ಕಟ್ಟಡ ನಿರ್ಮಾಣದ ಪೋಟೋಗಳನ್ನು ಅಳವಡಿಸಿರುವುದಿಲ್ಲ. ಕಟ್ಟಡ ರಚನೆ ಮತ್ತು ಪುನರ್ ರಚನೆಯ ಬಗ್ಗೆ ಇರುವ ನಮೂನೆಯಲ್ಲಿ ಮಾಹಿತಿಗಳನ್ನು ತುಂಬದೇ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಅಧ್ಯಕ್ಷರು ಸಹಿ ಮಾಡಿರುವುದು ಕಂಡು ಬರುತ್ತದೆ. ಸದರಿ ಕಟ್ಟಡ ರಚನೆ ಪರವಾನಗೆಯಲ್ಲಿ ಮಂಜೂರಾದ ಕಟ್ಟಡದ ವಿವರ ಖಾಲಿ ಬಿಡಲಾಗಿರುತ್ತದೆ.

9. ಹಾಗೆಯೇ ಶ್ರೀಮತಿ ಕವಿತಾ ಎ ತಮಶೆಟ್ಟಿ ಇವರಿಗೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಲಾಗಿದೆ. ಬಸವ ವಸತಿ ಯೋಜನೆಯಡಿಯಲ್ಲಿ ಆಯ್ಕೆ ಪತ್ರ ಕ್ರ.ಸಂ.126ರ ಮುಖ ಪುಟದ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಮುಖಪುಟದಲ್ಲಿ ತುಂಬಬೇಕಾದಂತಹ ಮಾಹಿತಿಗಳನ್ನು ಖಾಲಿ ಬಿಡಲಾಗಿರುತ್ತದೆ. ಕಾಮಗಾರಿ ಆದೇಶದ ಪ್ರತಿಯನ್ನು (ನಮೂನೆ 9) ಹಾಜರುಪಡಿಸಿದ್ದು, ಇದು ಸಂಪೂರ್ಣವಾಗಿ ಖಾಲಿ ಬಿಡಲಾಗಿದ್ದು, ಇದಕ್ಕೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಲೀ ಅಥವಾ ಕಾರ್ಯದರ್ಶಿಯಾಗಲೀ ಸಹಿ ಮಾಡಿರುವುದಿಲ್ಲ. ಇ-ಸ್ಟಾಂಪ್ ಪೇಪರ್‌ನ ಕರಾರು ಪತ್ರ (ನಮೂನೆ 2ಎ) ವನ್ನು ಸಂಪೂರ್ಣವಾಗಿ ಖಾಲಿ ಬಿಡಲಾಗಿದ್ದು, ನಿಗಮದ ಪರವಾಗಿ ಯಾರೂ ಸಹಿ ಮಾಡಿರುವುದಿಲ್ಲ. ವಸತಿ ರಹಿತ ಪ್ರಮಾಣ ಪತ್ರದಲ್ಲಿ ಮಾಹಿತಿಯನ್ನು ತುಂಬದೇ ಕಾರ್ಯದರ್ಶಿ ಸಹಿ ಮಾಡದೇ ಹಾಗೆಯೇ ಖಾಲಿ ಬಿಡಲಾಗಿರುತ್ತದೆ. ನಮೂನೆ 10 ಹಾಜರುಪಡಿಸಿದ್ದು, ಅದು ಸಂಪೂರ್ಣ ಖಾಲಿ ಇದ್ದು, ಯಾವ ಅಧಿಕಾರಿಯು ಸಹಿ ಮಾಡಿರುವುದಿಲ್ಲ. ಹಾತ್ ನಕಾಶೆಯ ಪ್ರತಿ ಹಾಜರುಪಡಿಸಿದ್ದು, ಸದರಿ ಹಾತ್ ನಕಾಶೆ ಪ್ರತಿಯಲ್ಲಿಯೂ ಸಹ ಯಾವುದೇ ಮಾಹಿತಿ ತುಂಬಿರುವುದಿಲ್ಲ. ಹಾಗೂ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯ ಸಹಿ ಇರುವುದಿಲ್ಲ. ಚೆಕ್ ಲಿಸ್ಟ್ ಪ್ರತಿಯನ್ನು ಹಾಜರುಪಡಿಸಿದ್ದು, ಇದು

ಸಂಪೂರ್ಣವಾಗಿ ಖಾಲಿ ಇರುತ್ತದೆ. ಕಟ್ಟಡ ರಚನೆ/ಪುನರ್ ರಚನೆ ಬಗೆಗಿನ ಪರವಾನಗೆ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯ ಪ್ರತಿಯಲ್ಲಿ ಯಾವುದೇ ದಾಖಲೆ ಭರ್ತಿ ಮಾಡಿರುವುದಿಲ್ಲ. ಇದಕ್ಕೆ ಪಿಡಿಓ ರವರ ಸಹಿಯಾಗಲೀ ಅಥವಾ ಅಧ್ಯಕ್ಷರ ಸಹಿಯಾಗಲೀ ಇರುವುದಿಲ್ಲ. ನಮೂನೆ 1 ಅರ್ಜಿಯಲ್ಲಿ ಯಾವುದೇ ಮಾಹಿತಿಯನ್ನು ಭರ್ತಿ ಮಾಡಿರುವುದಿಲ್ಲ ಹಾಗೂ ಪಲಾನುಭವಿಯ ಭಾವಚಿತ್ರ ಅಂಟಿಸಿರುವುದಿಲ್ಲ.

10. ಶ್ರೀಮತಿ ಸವಿತಾ ಅಪ್ಪಸಾಬ್ ತಮಶೆಟ್ಟಿ ಇವರಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದು, ಸದರಿ ದಾಖಲೆಗಳ ಮುಖಪುಟದ ಪ್ರತಿಯನ್ನು ಹಾಜರುಪಡಿಸಿದ್ದು, ಅದರಲ್ಲಿ ಫಲಾನುಭವಿಯ ಹೆಸರನ್ನು ಹೊರತುಪಡಿಸಿ ಮತ್ತಾವುದೇ ಮಾಹಿತಿಯನ್ನು ತುಂಬಿರುವುದಿಲ್ಲ. ಕರಾರು ಪತ್ರದ (ನಮೂನೆ2ಎ) ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಕರಾರು ಪತ್ರದ ಪುಟ 2ರಲ್ಲಿ ಮಾಹಿತಿಯನ್ನು ಸಂಪೂರ್ಣವಾಗಿ ಖಾಲಿ ಬಿಡಲಾಗಿದೆ ಹಾಗೂ ನಿಗಮದ ಪರವಾಗಿ ಯಾರೊಬ್ಬರು ಸಹಿ ಮಾಡಿರುವುದಿಲ್ಲ. ಕಟ್ಟಡ ರಚನೆ ಪರವಾನಗೆಯ ಪ್ರತಿಯನ್ನು ಹಾಜರುಪಡಿಸಿದ್ದು, ಮಂಜೂರಾದ ಕಟ್ಟಡ ರಚನೆಯ ವಿವರವನ್ನು ಸದರಿ ದಾಖಲೆಯಲ್ಲಿ ತುಂಬಿರುವುದಿಲ್ಲ ಹಾಗೂ ಸದರಿ ಪರವಾನಗೆಯ ಪ್ರತಿಯನ್ನು ಪರಿಶೀಲಿಸಿದಲ್ಲಿ ಇದರಲ್ಲಿ ಸಂಪೂರ್ಣ ಮಾಹಿತಿಯನ್ನು ಅಳವಡಿಸದೇ ಇರುವುದು ಸ್ಪಷ್ಟ ಪಡುತ್ತದೆ. ಈ ಹಿಂದೆ ಹೇಳಿದ ಶ್ರೀಮತಿ ಕವಿತಾ ತಮಶೆಟ್ಟಿ ಇವರ ಅರ್ಜಿಯಲ್ಲಿ ಹಾಗೂ ಇತರೆ ದಾಖಲೆಗಳಲ್ಲಿ ಫಲಾನುಭವಿಯ ಸಹಿಯನ್ನು KAT ಎಂದು ನಮೂದಿಸಿದ್ದು, ಶ್ರೀಮತಿ ಸವಿತಾ ತಮಶೆಟ್ಟಿಯವರಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಫಲಾನುಭಿವಿಯ ಸಹಿಯನ್ನು SAT ಎಂದು ನಮೂದಿಸಿರುವುದು ಕಂಡು ಬರುತ್ತದೆ. ಅಂದರೆ, ಈ ಸಹಿಗಳ ಬಗ್ಗೆ ಸ್ಪಷ್ಟತೆ ಇಲ್ಲದೇ ಅನುಮಾನಕ್ಕೆ ಎಡೆಮಾಡಿಕೊಟ್ಟಿರುತ್ತದೆ.

11. ಇದಲ್ಲದೇ ತನಿಖಾಧಿಕಾರಿಯವರು ವಿಚಾರಣಾ ಕಾಲದಲ್ಲಿ ಅವ್ವಮ್ಮ ತಮಶೆಟ್ಟಿಯವರು ಶ್ರೀ ರಮೇಶ್ ಶಿವಣ್ಣ ತಮಶೆಟ್ಟಿ ಈತನು ತನ್ನ ಮಗನಿರುವ ಬಗ್ಗೆ ಹಾಗೆ ಶ್ರೀಮತಿ ಶ್ರೀದೇವಿ ತಮಶೆಟ್ಟಿಯವರು ಶ್ರೀ ರಮೇಶ್ ತಮಶೆಟ್ಟಿ ತನ್ನ ಪತಿ ಇರುವ ಬಗ್ಗೆ ಹಾಗೂ ಶ್ರೀಮತಿ ಕವಿತಾ ತಮಶೆಟ್ಟಿ ಇವರು ಶ್ರೀ ರಮೇಶ್ ತಮಶೆಟ್ಟಿ ಇವರು ಮೈದುನ ಇರುವ ಬಗ್ಗೆ ತಿಳಿಸಿರುತ್ತಾರೆಂದು ಹಾಗೂ ಶ್ರೀ ರಮೇಶ್ ಶಿವಣ್ಣ ತಮಶೆಟ್ಟಿ ಇವರು ಹಿರೇಬೇವನೂರು ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿರುತ್ತಾರೆಂದು ತಿಳಿಸಿರುತ್ತಾರೆ. ಶ್ರೀಮತಿ ಕವಿತಾ ತಮಶೆಟ್ಟಿ ಮತ್ತು ಶ್ರೀಮತಿ ಸವಿತಾ ತಮಶೆಟ್ಟಿ ಇವರು ಒಬ್ಬರೇ ವ್ಯಕ್ತಿಯಾಗಿರುತ್ತಾರೆಂದು, ಸದರಿ ಫಲಾನುಭವಿಗಳ ಕಡತಗಳಲ್ಲಿ ಒಬ್ಬರೇ ವ್ಯಕ್ತಿಯ ಪೋಟೋವನ್ನು ಲಗತ್ತಿಸಲಾಗಿದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಇದಲ್ಲದೇ, ಪಂಚಾಯತಿ ಆಸ್ತಿ ರಿಜಿಸ್ಟರ್‌ಗಳನ್ನು ಪರಿಶೀಲಿಸಲಾಗಿ ಮೇಲೆ ಹೇಳಿದ ಫಲಾನುಭವಿಗಳ ಹೆಸರಿನಲ್ಲಿ ಇದೇ

ಎಂದು ತೋರಿಸಲಾದ ಆಸ್ತಿಗಳು ಅಂದರೆ ಆಸ್ತಿ ನಂ.460, 85, 460/1, 386/ಎ ಗಳಿಗೆ ಸಂಬಂಧಿಸಿದಂತೆ ಫಲಾನುಭವಿಗಳ ಹೆಸರುಗಳು ನಮೂದು ಇರುವುದಿಲ್ಲ. ಆಸ್ತಿ ನಂಬರ್ 460 ಶ್ರೀ ಶಿವಣ್ಣ ಕಲಪ್ಪ ತಮಶೆಟ್ಟಿ ಇವರಿಗೆ ಸೇರಿದ್ದಾಗಿರುತ್ತದೆ. ಆಸ್ತಿ ನಂಬರ್ 386 ಶ್ರೀ ಭೀಮರಾಯ ಶಿವಪ್ಪ ದೇವರಾಯ ಇವರಿಗೆ ಸೇರಿದ್ದಾಗಿರುತ್ತದೆ ಮತ್ತು ಆಸ್ತಿ ನಂಬರ್ 85 ಪಿಪಿಸಿ ಜಾಗ ಎಂದು ನಮೂದಾಗಿರುವುದು ಕಂಡು ಬರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ, ಆಸ್ತಿ ಸಂಖ್ಯೆ: 460/1 ಮತ್ತು 386/ಎ ಇವುಗಳು ಆಸ್ತಿ ರಿಜಿಸ್ಟರ್‌ನಲ್ಲಿ ದಾಖಲೆ ಆಗದೇ ಇರುವುದು ಕಂಡು ಬರುತ್ತದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

12. ಇದಲ್ಲದೇ ಜಿಪಿಎಸ್ ನಲ್ಲಿ ಅಳವಡಿಸಿರುವ ಮನೆಗಳ ಫೋಟೋಗಳಿಗೂ ಸ್ಥಾನಿಕ ಪರಿಶೀಲನೆಯಲ್ಲಿರುವ ಮನೆಗಳಿಗೂ ವ್ಯತ್ಯಾಸವಿರುವುದು ಕಂಡು ಬರುತ್ತದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. 2010–11ನೇ ಸಾಲಿನ ಬಸವ ವಸತಿ ಯೋಜನೆಯ ಫಲಾನುಭವಿಗಳ ಆಯ್ಕೆ ಮಾಡಿದ ಬಗ್ಗೆ ಪಂಚಾಯತಿ ನಡುವಳಿಗಳ ಪುಸ್ತಕದ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ. ಆದರೆ, ಗ್ರಾಮ ಸಭೆಯ ಸಂದರ್ಭದಲ್ಲಿ ವಿಡಿಯೋಗ್ರಾಫ್ ಸಿಡಿ ತೆಗೆದಿರುವ ಬಗ್ಗೆ ಸಿಡಿ ಲಭ್ಯವಿಲ್ಲವೆಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ತಿಳಿಸಿರುತ್ತಾರೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ (ಆದರೆ, ಇದು ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆ ಕಾಲದಲ್ಲಿ ಗ್ರಾಮ ಸಭೆಯ ವಿಡಿಯೋ ಗ್ರಾಫ್ ಮಾಡಿ ಸಿಡಿಯನ್ನು ಇಡಬೇಕಾಗಿರುವುದು ಸರ್ಕಾರದ ಮಾರ್ಗಸೂಚಿಗಳಲ್ಲಿ ಒಂದಾಗಿರುತ್ತದೆ. ಆದ್ದರಿಂದ, ಸದರಿ ಮಾರ್ಗಸೂಚಿ ಉಲ್ಲಂಘಿಸಿರುವುದು ಸ್ಪಷ್ಟ ಪಡುತ್ತದೆ). ಹಾಗೆಯೇ ಬಸಮ್ಮ ಜಗಧೀಶ ಸಣಕನ್ನಳ್ಳಿ ಇವರನ್ನು ಬಸವ ವಸತಿ ಯೋಜನೆಯಡಿಯಲ್ಲಿ ಪಲಾನುಭವಿಯಾಗಿ ಆಯ್ಕೆ ಮಾಡಲಾಗಿದ್ದು, ಇವರ ಕೋಡ್ ನಂ:168727 ಎಂದು ಇದ್ದು, ಇವರಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿರುವುದು ಕಂಡು ಬರುವುದಿಲ್ಲ. ಉಳಿದಂತಹ ಆರೋಪಗಳಿಗೆ ಸಂಬಂಧಿಸಿದಂತೆ, 18 ಅಂಶಗಳ ಅಪಾದನೆಗಳು ಸಾಮಾನ್ಯ ಸ್ವರೂಪ (General) ಆಪಾದನೆಯಾಗಿದ್ದು, ಯಾವುದೇ ನಿರ್ದಿಷ್ಟ ಆಪಾದನೆಗಳಾಗಿರುವುದಿಲ್ಲವೆಂದು, ಈ ವಿಚಾರದಲ್ಲಿ ಅರ್ಜಿದಾರರನ್ನು ಸಂಪರ್ಕಿಸಲು ಪ್ರಯತ್ನಿಸಲಾಗಿ ಅರ್ಜಿದಾರರು ವಿಚಾರಣೆಗೆ ಲಭ್ಯವಾಗಿರುವುದಿಲ್ಲವೆಂದು, ಅವರಿಗೆ ನೋಟೀಸ್ ನೀಡಲಾಗಿದ್ದು, ಅರ್ಜಿದಾರರು ಹಾಜರಾಗಿರುವುದಿಲ್ಲ ಮತ್ತು ಅವರು ಚಿಕಿತ್ಸೆಗಾಗಿ ಬೆಂಗಳೂರಿಗೆ ಹೋಗಿರುವ ಬಗ್ಗೆ ಮನೆಯಲ್ಲಿ ತಿಳಿಸಿರುತ್ತಾರೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಇದಲ್ಲದೇ 2012–13ನೇ ಸಾಲಿನ ನರೇಗಾ ಯೋಜನೆಯಡಿಯಲ್ಲಿನ ದಾಖಲೆಗಳನ್ನು ಪಡೆದಿದ್ದು, ಅವುಗಳ ಬಗ್ಗೆ ಯಾವುದೇ ಆಪಾದನೆಗಳು ಇರುವುದಿಲ್ಲವೆಂದು ಕಂಡು ಬಂದಿರುತ್ತದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

13. ಈ ಎಲ್ಲ ಮೇಲಿನ ಅಂಶಗಳನ್ನು ಪರಿಶೀಲಿಸಿದಲ್ಲಿ ಎದುರುದಾರರುಗಳು ವಸತಿ ಯೋಜನೆಯಡಿಯಲ್ಲಿನ ಸರ್ಕಾರದ ಮಾರ್ಗಸೂಚಿಗಳನ್ನು ಧಿಕ್ಕರಿಸಿ ತಮ್ಮ ಹತ್ತಿರದ ಸಂಬಂಧಿಕರನ್ನೇ ಫಲಾನುಭವಿಗಳೆಂದು ಆಯ್ಕೆ ಮಾಡಿ ಅವರುಗಳಿಗೆ ಮನೆಗಳನ್ನು ಮಂಜೂರು ಮಾಡಿ ಹಣ ಬಿಡುಗಡೆ ಮಾಡಿರುತ್ತಾರೆ ಹಾಗೂ ಮೇಲೆ ಹೇಳಿದಂತೆ ಸಂಬಂಧಪಟ್ಟ ದಾಖಲೆಗಳನ್ನು ಸರಿಯಾಗಿ ನಿರ್ವಹಿಸದೇ ಇರುವುದು ಕಂಡುಬರುತ್ತದೆ ಹಾಗೂ ಇತರೆ ಅರ್ಹ ಫಲಾನುಭವಿಗಳು ವಸತಿ ಯೋಜನೆಯಡಿಯಲ್ಲಿನ ಮನೆಯ ಪಡೆಯುವ ಸೌಲಭ್ಯದಿಂದ ವಂಚಿತರಾಗಲು ಕಾರಣೀಕರ್ತರಾಗಿರುತ್ತಾರೆ.

14. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಹಿರೇಬೇವನೂರು ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಶ್ರೀ ರಮೇಶ್ ತಮಶೆಟ್ಟಿಯವರು 2010–11ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ತಮ್ಮ ಹತ್ತಿರದ ಸಂಬಂಧಿಗಳನ್ನೇ ವಸತಿ ಯೋಜನೆಯಲ್ಲಿ ಫಲಾನುಭವಿಗಳನ್ನಾಗಿ ಆಯ್ಕೆ ಮಾಡಿ ಮನೆ ಮಂಜೂರು ಮಾಡಿರುವುದು ಸರ್ಕಾರದ ಮಾರ್ಗಸೂಚಿಗೆ ವಿರುದ್ಧ ವಾಗಿರುವುದರಿಂದ, ಸದರಿಯವರಿಂದ ಸದರಿ ಮೊತ್ತದ ಹಣವನ್ನು ವಸೂಲು ಮಾಡಲು ಕಾನೂನು ರೀತ್ಯ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಕೈಗೊಂಡ ಕ್ರಮದ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 16/3

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

16/3/14